**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ. 1017/2024**

| | | |
|---|---|---|
| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿಃ** |
| ಸಿದ್ದಾಪುರ ನಗರ ಪೋಲೀಸ್ ಠಾಣೆ | | ಸತೀಶ್ ಪಿ.ಜಿ @ ಪುಟ್ಟ |

**::ದೋಷಾರೋಪಣೆ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ವಿರಾಜಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆಃ**

ಸತೀಶ್ ಪಿ.ಜಿ @ ಪುಟ್ಟ , ತಂದೆಃ ಗಣೇಶ,44 ವರ್ಷ,
ವಾಸಃ ಚೆನ್ನಂಗಿ ಗುಡ್ಲೂರು, ವಿರಾಜಪೇಟೆ ತಾ||
ಪ್ರಸ್ತುತ ವಾಸ ಃ ಮುತ್ತೂರು ಗ್ರಾಮ, ಪಿರಿಯಾಪಟ್ಟಣ,
ಮೈಸೂರು ಜಿಲ್ಲೆ.

**ನಿಮ್ಮ ಮೇಲೆ ಇರುವ ದೋಷಾರೋಪ ಇಂತಿದೆಃ**

ದಿನಾಂಕ 20-06-2024 ರಂದು ಸಮಯ ಮಧ್ಯಾಹ್ನ 3.15 ಗಂಟೆಗೆ ಸಿದ್ದಾಪುರ ಪೋಲೀಸ್ ಠಾಣೆ ಸರಹದ್ದಿನ ಮಾಲ್ದಾರೆ ಪೋಲೀಸ್ ಚೆಕ್ ಪೋಸ್ಟ್ ಹತ್ತಿರ ಸಾಕ್ಷಿ-1 ರಿಂದ 6 ರವರುಗಳು ಸಮವಸ್ತ್ರದಲ್ಲಿ ಪರಿಶೀಲನೆ ಮಾಡುತ್ತಿರುವಾಗ ಆರೋಪಿಯಾದ ನೀವು ಕೆಎ-30 ಎಂ-2940 ರ ನೊಂದಣಿ ಸಂಖ್ಯೆಯ ಮಾರುತಿ **800** ಕಾರಿನಲ್ಲಿ ಮುತ್ತೂರು ಕಡೆಯಿಂದ ಮಾಲ್ದಾರೆ ಕಡೆಗೆ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ತಾನು ವಾಸವಿರುವ ಮನೆಯ ಹಿಂಭಾಗದ ವಸಾರಿನಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸಿ ಕಳ್ಳಭಟ್ಟಿ ಸಾರಾಯಿಯನ್ನು ಗಿರಾಕಿಗಳಿಗೆ ಮಾರಾಟ ಮಾಡಲು ಕಾರಿನಲ್ಲಿ ಸಾಗಿಸುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(2) ಮತ್ತು 34 ಸಹವಾಚಕ

13(1)(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ಆರೋಪಗಳನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ದೋಷಾರೋಪವನ್ನು ಆರೋಪಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

07 ನೇ ಜನವರಿ ಮಾಹೆ 2025.

ಸಹಿಃ

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.